1 ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 24-2018

**ಸಿ.ಡಬ್ಲು -**4, **ಪಿ.ಡಬ್ಲು -**2

**ಸಾಕ್ಷಿದಾರರ ಹೆಸರು** : ರಂಗಪ್ಪ
ತಂದೆಯ **ಹೆಸರು** : ಪುಟ್ಟಪ್ಪ
**ವಯಸ್ಸು** : 71 ವರ್ಷ
**ಉದ್ಯೋಗ** : ನಿವೃತ್ತ ಎ.ಎಸ್.ಐ.
**ವಾಸ** : ಶಿವಮೊಗ್ಗ.

**ಪ್ರಮಾಣೀಕರಿಸಿದ ದಿನಾಂಕ :15.06.2026.**

**ಮುಖ್ಯ ವಿಚಾರಣೆ :** ಸ.ಸ.ಅ. ರವರಿಂದ

1. ನಾನು 2013 ರಿಂದ 2016 ರವರೆಗೆ ಸಾಗರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ06.02.2015 ರಂದು ನಾನು ಠಾಣೆಯಲ್ಲಿದ್ದಾಗ ಚಾಸ 1 ರವರು ತಮಗೆ ಬಂದ ಮಾಹಿತಿಯ ಮೇರೆಗೆ ಯಳಗಳಲೆ ಗ್ರಾಮದ ಸೇತುವೆಯ ಬಳಿ ಯಾರೋ ಇಬ್ಬರು ವ್ಯಕ್ತಿಗಳು ಬಂದೂಕುಗಳನ್ನು ತಂದಿದ್ದಾರೆ ದಾಳಿ ಮಾಡುವುದಿದೆ ಎಂದು ನನ್ನನ್ನು ಮತ್ತು ಚಾಸ 5 ರಿಂದ 8 ರವರನ್ನು ಕರೆದುಕೊಂಡು ಇಲಾಖಾ ವಾಹನದಲ್ಲಿ ಚಾಸ 1 ರವರು ದಾಳಿಗೆ ಹೊರಟರು. ರಾಮನಗರದ ಬಳಿ ಚಾಸ 2 ಮತ್ತು 3 ರವರು ಸಿಕ್ಕಿದ್ದು, ಅವರಿಗೆ ದಾಳಿಯ ವಿಷಯವನ್ನು ತಿಳಿಸಿ ಅವರಿಗೆ ನೋಟೀಸ್ ಜಾರಿ ಮಾಡಿದ್ದು, ಚಾಸ 2 ಮತ್ತು 3 ರವರು ಪಂಚರಾಗಿ ಬರಲು ಒಪ್ಪಿದ ನಂತರ ಅವರನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋದೆವು. ಹಳ್ಳದ ಬಳಿ ನಮ್ಮ ಜೀಪನ್ನು ನೋಡಿದ ತಕ್ಷಣ ಆ ವ್ಯಕ್ತಿಗಳು ಓಡಲು ಪ್ರಯತ್ನಿಸಿದರು, ಆದರೆ ನಾವು ಅವರನ್ನು ಸುತ್ತುವರೆದು ಹಿಡಿದೆವು.

3. ದೊರೆತ ವ್ಯಕ್ತಿಗಳ ವಿಚಾರಣೆ ಮಾಡಿದಾಗ ಒಬ್ಬ ವ್ಯಕ್ತಿ ತನ್ನ ಹೆಸರು ಅಜಯ್ ಎಂದು ತಿಳಿಸಿದ, ಮತ್ತೊಬ್ಬ ತನ್ನ ಹೆಸರು ಪ್ರಮೋದ್ ಎಂದು ಹೇಳಿದ. ಅಜಯ್ ಎಂಬುವವನ ಕೈಯಲ್ಲಿ ನಾಡ ಬಂದೂಕು ಇತ್ತು. ನಾಡಬಂದೂಕನ್ನು ಹೊಂದಲು ಪರವಾನಗಿ ಇದೆಯೇ ಎಂದು ವಿಚಾರಿಸಿದಾಗ ಆ ರೀತಿಯ ಯಾವುದೇ ಪರವಾನಗಿ ಇಲ್ಲ, ನಾವು ಕಾಡು ಪ್ರಾಣಿಗಳ ಬೇಟೆಗಾಗಿ ಇಟ್ಟುಕೊಂಡಿರುವುದಾಗಿ ಆ ವ್ಯಕ್ತಿಗಳು ತಿಳಿಸಿದರು.

ನಂತರ ಚಾಸ 1 ಪಂಚರ ಸಮಕ್ಷಮ ಪಂಚನಾಮೆಯ ಕ್ರಮವನ್ನು ಜರುಗಿಸಿ ನಾಡಬಂದೂಕನ್ನು ಆರ್ ಪಿ ಎಫ್ ಅಕ್ಷರಗಳಿಂದ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದರು. ಪಂಚನಾಮೆಯನ್ನು ಮಧ್ಯಾಹ್ನ 12.30 ರಿಂದ 1.30 ರವರೆಗೆ ಜರುಗಿಸಲಾಯಿತು. ನಂತರ ಚಾಸ 1 ರವರು ಆರೋಪಿ ಮತ್ತು ನಾಡ ಬಂದೂಕನ್ನು ಹಾಗೂ ಪಂಚನಾಮೆಯೊಂದಿಗೆ ಠಾಣೆಗೆ ಹಿಂದಿರುಗಿ ಆರೋಪಿತರ ವಿರುದ್ಧ ಸರ್ಕಾರಿ ತರ್ಫೆಯಲ್ಲಿ ದೂರನ್ನು ಸಲ್ಲಿಸಿದರು.

4. ಸಾಕ್ಷಿಯು ನಿಪಿ 1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಛಾಯಾಚಿತ್ರಗಳಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಛಾಯತಾಚಿತ್ರಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ಆ ದಿನ ನಾಡಬಂದೂಕು ಹೊಂದಿದ ವ್ಯಕ್ತಿಗಳಲ್ಲಿ ಅಜಯ್ ಎಂಬ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಆರೋಪಿ ಸ್ಥಾನದಲ್ಲಿರುತ್ತಾರೆ. ಮತ್ತೊಬ್ಬ ಆರೋಪಿಯಾದ ಪ್ರಮೋದನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಾಡಬಂದೂಕನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುঃ- ಆರೋಪಿ ಪರ ಶ್ರೀ ಐ.ಎನ್.ಎಸ್. ವಕೀಲರಿಂದঃ-</u>

1. ಆ ದಿನ ನಾವು ಮಧ್ಯಾಹ್ನ 12 ಗಂಟೆ 10 ನಿಮಿಷಕ್ಕೆ ಠಾಣೆಯನ್ನು ಬಿಟ್ಟಿರುತ್ತೇವೆ. ಇಲಾಖಾ ವಾಹನದ ಸಂಖ್ಯೆ ಮತ್ತು ಚಾಲಕನ ಹೆಸರು ಈಗ ನನಗೆ ನೆನಪಿಲ್ಲ. ಘಟನಾ ಸ್ಥಳ ನಮ್ಮ ಠಾಣೆಯಿಂದ 4 ಕಿ ಮೀ ಅಂತರದಲ್ಲಿರುತ್ತದೆ. ರಾಮನಗರ ಬಸ್ ನಿಲ್ದಾಣ ನಮ್ಮ ಠಾಣೆಯಿಂದ 3.5 ರಿಂದ 3.45 ಕಿ ಮೀ ಅಂತರದಲ್ಲಿರುತ್ತದೆ. ಯಳಗಳಲೆ ಗ್ರಾಮದ ರಸ್ತೆ ಪಕ್ಕದಲ್ಲಿ ಸಾಕಷ್ಟು ಮನೆಗಳಿವೆ ಎಂದರೆ ಸರಿ. ಆರೋಪಿತರು ಜೀಪನ್ನು ನೋಡಿ ಓಡಿ ಹೋದ ಸ್ಥಳದ ಚೆಕ್ಕುಬಂಧಿಯನ್ನು ಹೇಳಲು ಆಗುವುದಿಲ್ಲ. ಚಾಸ 1 ಯಳಗಳಲೆ ಗ್ರಾಮದ ಸ್ಥಳೀಯ ನಿವಾಸಿಗಳನ್ನು ಪಂಚರನ್ನಾಗಿ ಕರೆದಿರುವುದಿಲ್ಲ.

2. ನಾಡ ಬಂದೂಕನ್ನು ಜಪ್ತುಪಡಿಸಿಕೊಳ್ಳುವ ಪೂರ್ವದಲ್ಲಿ ಚಾಸ 1 ನಾಡ ಬಂದೂಕಿನ ಮೇಲಿರುವ ಬೆರಳಚ್ಚುಗಳನ್ನು ಸಂಗ್ರಹಿಸುವ ಕೆಲಸ ಮಾಡಲಿಲ್ಲ.

ಆರೋಪಿತರ ಬೆರಳಚ್ಚುಗಳನ್ನು ಚಾಸ 1 ರವರು ಪಡೆಯುವ ಪ್ರಯತ್ನ ಮಾಡಲಿಲ್ಲ. ಯಳಗಳಲೆ ಗ್ರಾಮದಿಂದ ಗೆಣಸಿನಕುಣಿ ಗ್ರಾಮ 3 ರಿಂದ 4 ಕಿ ಮೀ ಅಂತರದಲ್ಲಿರಬಹುದು. ಯಳಗಳಲೆ ಗ್ರಾಮದಿಂದ ಕೇರಳ ರಾಜ್ಯ ಎಷ್ಟು ಕಿ ಮೀ ಅಂತರದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿತರು ಆ ಸ್ಥಳಕ್ಕೆ ಯಾವ ರೀತಿ ಬಂದರು ಎಂದು ಚಾಸ 1 ತನಿಖೆ ಮಾಡಿರುವುದಿಲ್ಲ.

3. ಆರೋಪಿತರ ಅಂಗತಪಾಸಣೆಯನ್ನು ಚಾಸ 1 ಮಾಡಿರುವುದಿಲ್ಲ. ಬಂದೂಕು ಉಪಯೋಗಿಸಲ್ಪಟ್ಟಿದೆಯೋ ಇಲ್ಲವೋ ಎಂದು ಚಾಸ 1 ಸ್ಥಳದಲ್ಲಿ ವಿಚಾರಣೆ ಮಾಡಿರುತ್ತಾರೆ. ಬಂದೂಕಿನ ಒಳಗಿನ ಗುಂಡುಗಳನ್ನು ಹೊರತೆಗೆಯುವ ಪ್ರಯತ್ನವನ್ನು ಚಾಸ 1 ಮಾಡಿರುವುದಿಲ್ಲ. ಬಂದೂಕು ಎಲ್ಲಿಂದ ಬಂತು ಎಂದು ಚಾಸ 1 ನನ್ನ ಸಮಕ್ಷಮ ತನಿಖೆ ಮಾಡಿರುವುದಿಲ್ಲ. ಮಹಜರ್ ಗೆ ಸಹಿ ಮಾಡಿರುವ ಸಿಬ್ಬಂದಿಗಳು ನಿಪಿ 3 ಮತ್ತು 4 ಛಾಯಾಚಿತ್ರಗಳಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ಬಂದೂಕಿನ ತೂಕವನ್ನು ಚಾಸ 1 ಸ್ಥಳದಲ್ಲಿ ಮಾಡಲಿಲ್ಲ. ಬಂದೂಕಿನ ಉದ್ದಗಲದ ಅಳತೆಯನ್ನು ಚಾಸ 8 ಮಾಡಿರುತ್ತಾರೆ. ಮಾದರಿ ಮೊಹರಿನ ಪ್ರತಿಯನ್ನು ಪಂಚರಿಗೆ ನೀಡುವ ಪ್ರಯತ್ನವನ್ನು ಚಾಸ 1 ಮಾಡಲಿಲ್ಲ. ಆರೋಪಿತರ ವಶದಿಂದ ಯಾವುದೇ ಬಂದೂಕನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಆ ಸ್ಥಳದಲ್ಲೇ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.